**ದಿನಾಂಕಃ 18-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಹೆಚ್.ಎಮ್.ಎಸ್. ವಕೀಲರಿಂದಃ**

ನನ್ನ ಬಗ್ಗೆ ಶಹರ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ದ ಕೊಲೆ ಕೇಸು ದಾಖಲಾಗಿದ್ದ ಸಂಬಂದ ಎಫ್ ಐ ಆರ್ ಮತ್ತು ದೂರಿನ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿ ಡಿ -9 ಮತ್ತು ನಿ ಡಿ -10 ಎಂದು, ಅದೇ ರೀತಿ ಆ ಕೇಸಿಗೆ ಸಂಬಂದಪಟ್ಟಂತೆ ಚಾರ್ಜ ಶೀಟ್ ನ್ನು ಸಲ್ಲಿಸಿದ್ದು ಅದನ್ನು ಈಗ ನಿ ಡಿ -11 ಎಂದು, ಆ ಕೇಸಿನಲ್ಲಿಪೋಲಿಸರು ಮಾಡಿರುವ ಸ್ಥಳ ಮಹಜರ್ ನ್ನು ನಿ ಡಿ -12 ಎಂದು ಹಾಗೂ ಆ ಸ್ಥಳದಲ್ಲಿ ತೆಗೆದಿರುವ ಪೋಟೋಗಳ ನಕಲುಗಳನ್ನು ನಿ ಡಿ -13 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಯ ಗಂಡ ಯಾವತ್ತೂ ವಿಲ್ ನ್ನು ನನ್ನ ಪರವಾಗಿ ಬರೆದುಕೊಡುವ ಪ್ರಮಯ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಅನಾರೋಗ್ಯದಿಂದ ಬಳಲುತ್ತಿರುವಾಗ ಮೋಸದಿಂದ ನಿ ಡಿ -1 ವಿಲ್ ನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಬಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ರಿಂದ 4 ನೇ ಪ್ರತಿವಾದಿಯರಿಗೆ ಸಂಬಂದಪಟ್ಟ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ನನಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಾಸುದೇವ ಹೆಬ್ಬಾರ್ ರವರು ದಾವಾ ಆಸ್ತಿಗೆ ಸಂಬಂದಪಟ್ಟಂತೆ ನನ್ನ ಪರವಾಗಿ ಯಾವುದೇ ವಿಲ್ ನ್ನು ಮಾಡಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.